# ವಿನ್ಸೆಂಟ್ ಜೀವನ ಪ್ರೀತಿ



ಫ್ರಾನ್ಸ್‌ನಿಂದ ಬಂದ ವಿನ್ಸೆಂಟ್

ಫ್ರೆಂಚ್ ಮಂದಿಗೆ ಊಟ ತಿಂಡಿ– ಆಹಾರದ ಬಗ್ಗೆ ಬಹಳ ಆಸಕ್ತಿ. ಪ್ರಪಂಚದ ಯಾವ ಮೂಲೆಗೆ ಹೋದರೂ ಫ್ರಾನ್ಸ್ ಮಂದಿ ಆಯಾಯ ಜಾಗದ ಪ್ರಾದೇಶಿಕ ಊಟದ ರುಚಿ ನೋಡುವ ಬದಲು ತಮ್ಮದೇ ದೇಶದ ರೆಸ್ಟೋರೆಂಟ್ ಎಲ್ಲದೆ ಎಂದು ಹುಡುಕಾಡುತ್ತಾರೆ. ಫ್ರೆಂಚ್ ರೆಸ್ಟುರಾದಲ್ಲೇ ನಿತ್ಯ ಊಟ ತಿಂಡಿಗಳಿಗೆ ಮೊರೆ ಹೋಗುತ್ತಾರೆ. ಹೊಸ ಹೊಸ ರುಚಿಯತ್ತ ಗಮನ ಹರಿಸದೆ ತಮ್ಮದೇ ಅಡುಗೆ ಊಟವನ್ನೇ ಆತುಕೊಳ್ಳುತ್ತಾರೆ.

ಫ್ರಾನ್ಸ್‌ನಿಂದ ಕಳೆದ ಮೂರು ವರ್ಷಗಳ ಹಿಂದೆ ಬೆಂಗಳೂರಿಗೆ ವಿನ್ಸೆಂಟ್ ಪೀರ್ ಕ್ವಿಟ್ ಅವರೂ ಈ ಮೇಲಿನ ಮಾತು– ಅಭಿಪ್ರಾಯಗಳಿಗೆ ಹೊರತಲ್ಲ. ಸದ್ಯ ಕೋರಮಂಗಲ ದಲ್ಲಿ ಫ್ರೆಂಚ್ ರೆಸ್ಟೋರೆಂಟ್ ನಲ್ಲಿ ವ್ಯವಸ್ಥಾಪಕರಾಗಿರುವ ವಿನ್ಸೆಂಟ್‌ಗೆ ಇಲ್ಲಿ ವಾಸ ಎಂದರೆ ಪ್ರೀತಿ ಅಂತೆ.

ಇದಕ್ಕೂ ಮುನ್ನ ವಿನ್ಸೆಂಟ್ 2009ರಲ್ಲೇ ಬೆಂಗಳೂರಿಗೆ ಬ್ಯುಸಿನೆಸ್ ಸ್ಕೂಲ್ ಒಂದರಲ್ಲಿ ವಿದ್ಯಾರ್ಥಿಯಾಗಿ ಬಂದು ಉಳಿದುಕೊಂಡಿದ್ದರು. ಆಮೇಲೆ ದೆಹಲಿಗೆ ತೆರಳಿ ಅಲ್ಲೂ ಕೆಲಕಾಲ ಓದು ಮುಂದುವರಿಸಿದರು.ಅದಾಗಿ ಮತ್ತೆ ಪ್ಯಾರಿಸ್‌ಗೆ ತೆರಳಿದ ವಿನ್ಸೆಂಟ್ ಅಲ್ಲೇ ಉದ್ಯೋಗ ಹಿಡಿದರು. ಆಗಲೇ 'ಫ್ರೆಂಚ್ ಕಂಪೆನಿಯೊಂದು ಬೆಂಗಳೂರಿನಲ್ಲಿ ಉದ್ಯೋಗಕ್ಕಾಗಿ ಅರ್ಹರನ್ನು ಆಹ್ವಾನಿಸುತ್ತಿದೆ' ಎಂಬ ಜಾಹೀರಾತು ನೋಡಿದೆ. ಅದನ್ನು ನೋಡಿದ ಕೂಡಲೇ ಬೆಂಗಳೂರಿಗೆ ಬಂದೆ. ಈಗ ಇಲ್ಲಿಗೆ ಬಂದು ಮೂರು ವರ್ಷವಾಯಿತು. 'ಊರು ತುಂಬ ಹಿಡಿಸಿದೆ. ಹೀಗಾಗಿ ಮರಳಿ ಹೋಗುವ ಯೋಚನೆ ಇಲ್ಲ' ಎನ್ನುವುದು ವಿನ್ಸೆಂಟ್ ಖಚಿತ ಅಭಿಪ್ರಾಯ.

ಫ್ರಾನ್ಸ್‌ನ ಚಾರ್ಲಿವಿಲ್ಲೆ (ಬೆಲ್ಜಿಯಂನ ಗಡಿ ಪ್ರದೇಶ) ಎಂಬ ಪುಟ್ಟ ಊರಿನಲ್ಲಿ ಜನಿಸಿದವರು ವಿನ್ಸೆಂಟ್. 'ಪ್ರತಿ ಮೂರು ವರ್ಷಗಳಿಗೊಮ್ಮೆ ಇಲ್ಲಿ ಅಂತರರಾಷ್ಟ್ರೀಯ ಉದ್ಯಮ ಮೇಳ ನಡೆಯುತ್ತದೆ. ಹೀಗಾಗಿ ಸಣ್ಣ ಊರಾದರೂ ಫ್ರಾನ್ಸ್ ತುಂಬ ಪ್ರಸಿದ್ಧಿ ಪಡೆದಿದೆ' ಎನ್ನುತ್ತಾರೆ ವಿನ್ಸೆಂಟ್.

ಪ್ಯಾರಿಸ್ ತುಂಬ ಸುಂದರ ನಗರ. ಇಲ್ಲಿನ ಆಹಾರ ತುಂಬ ವೈವಿಧ್ಯಮಯ. ಆಲೂಗಡ್ಡೆ, ಚೀಸ್‌ಗಳಿಂದ ಇಲ್ಲಿ ರುಚಿಕರ ತಿನಿಸು ತಯಾರಿಸುತ್ತಾರೆ. ಬಹುತೇಕ ಎಲ್ಲರೂ ಈ ತಿನಿಸುಗಳನ್ನು ಇಷ್ಟಪಡುತ್ತಾರೆ. ಇಲ್ಲೂ ಫ್ರೆಂಚ್ ರೆಸ್ಟೋರೆಂಟ್‌ನಲ್ಲಿ ಪ್ಯಾರಿಸ್ ತಿಂಡಿಗಳನ್ನು ಮಾಡುತ್ತೇವೆ. ಇದಕ್ಕೆ ಬಹಳ ಬೇಡಿಕೆ ಇದೆ ಎಂದು ಹೇಳುತ್ತಾರೆ ಈ ಯುವಕ.

'ಪ್ಯಾರಿಸ್‌ನಲ್ಲಿದ್ದಾಗ ಭಾರತದಲ್ಲಿ ತಾಜ್‌ಮಹಲ್ ಇದೆ. ಅದು ಆಗ್ರಾದಲ್ಲಿದ್ದು ತುಂಬ ಸುಂದರವಾದ ಪ್ರವಾಸಿ ತಾಣ ಎಂದು ಕೇಳಿದ್ದೆ. ಭಾರತದ ಹಲವಾರು ಆಕರ್ಷಕ ಪ್ರವಾಸಿ ತಾಣಗಳನ್ನು ವೀಕ್ಷಿಸಿ ಬಂದವರ ಅಭಿಪ್ರಾಯವನ್ನು ತಿಳಿದುಕೊಂಡಿದ್ದೆ. ಆದರೆ ಭಾರತಕ್ಕೆ ಬಂದು ಈ ಪ್ರವಾಸಿ ತಾಣಗಳನ್ನು ಖುದ್ದಾಗಿ ನೋಡಿದಾಗ ಆದ ರೋಮಾಂಚಕ ಅನುಭವ ಮಾತ್ರ ವರ್ಣನೆಗೂ ನಿಲುಕದ್ದು'.

ದೆಹಲಿ ಸುತ್ತಮುತ್ತ ನೋಡುವಂಥ ಸುಂದರ ಜಾಗಗಳಿದ್ದರೂ ಅದಕ್ಕಿಂತ ಮಿಗಿಲಾಗಿ ಇದೊಂದು ಸಾಂಸ್ಕೃತಿಕ ನಗರ ಎಂಬುದು ಇಲ್ಲಿ ಕೆಲಕಾಲ ತಂಗಿದ್ದರಿಂದ ಮನದಟ್ಟಾಗಿತ್ತು. ಅದೇ ರೀತಿ ಬೆಂಗಳೂರು ಕೂಡ. ಸುಂದರ ಉದ್ಯಾನ ನಗರ. ಇಲ್ಲಿರುವಷ್ಟು ಸಸ್ಯ ಸಂಪತ್ತು ಬಹುಶಃ ಬೇರೆ ಯಾವ ದೇಶಗಳಲ್ಲೂ ಕಾಣಸಿಗುವುದಿಲ್ಲ. ಸಾಂಸ್ಕೃತಿಕವಾಗಿಯೂ ಬೆಂಗಳೂರು ನಗರ ಸಮೃದ್ಧ, ಶ್ರೀಮಂತವೂ ಆಗಿದೆ. ವೃತ್ತಿ ನಿಮಿತ್ತ ವಿನ್ಸೆಂಟ್ ದೇಶದ ಉದ್ದಗಲಕ್ಕೂ ಓಡಾಡುತ್ತಾರೆ.

'ಇಲ್ಲಿನ ಹೋಟೆಲ್ ಸಂಸ್ಕೃತಿ ಚೆನ್ನಾಗಿದೆ. ವೈವಿಧ್ಯಮಯ ಆಹಾರ ಉತ್ಪನ್ನಗಳು, ತಿಂಡಿ, ಊಟ, ಕರಿದ ತಿಂಡಿಗಳು, ಸಿಹಿ ತಿನಿಸುಗಳು, ಫಾಸ್ಟ್ ಫುಡ್, ಫಾರಿನ್ ಫುಡ್ ಎಲ್ಲವೂ ಇಲ್ಲಿ ಲಭ್ಯ. ಸಸ್ಯಾಹಾರಿ ಅಡುಗೆಗಳು ಬಹಳ ರುಚಿಯಾಗಿರುತ್ತವೆ. ಇದಕ್ಕೆಂದೇ ಮೀಸಲಾದ ಹೋಟೆಲ್‌ಗಳಿಗೂ ಆಗಾಗ ಭೇಟಿ ಕೊಡುತ್ತಿರುತ್ತೇನೆ. ಮಲ್ಟಿ ಕುಷನ್ ರೆಸ್ಟೋರೆಂಟ್‌ಗಳು ಕೂಡ ರುಚಿಕರ ಊಟ ತಿಂಡಿ ಒದಗಿಸುತ್ತವೆ. ಪ್ರಪಂಚದ ಎಲ್ಲ ಪ್ರದೇಶಗಳ ಆಹಾರವೂ ಇಲ್ಲಿ ಲಭ್ಯ. ಫ್ರೆಂಚ್ ರೆಸ್ಟೋರೆಂಟ್‌ಗಳೂ ಸಾಕಷ್ಟು ತಲೆ ಎತ್ತಿವೆ. ಇವೆಲ್ಲವೂ ಸ್ವಾದ, ರುಚಿ, ವೈವಿಧ್ಯತೆಗಳಿಗೆ ಹೆಸರಾಗಿವೆ. ಗ್ರಾಹಕರಿಗೆ ಊಟ ತಿಂಡಿಗಳಲ್ಲಿ ಹೆಚ್ಚು ಆಯ್ಕೆಗಳಿವೆ. ಹೀಗಾಗಿ ಇಲ್ಲಿ ಎಷ್ಟು ವರ್ಷಗಳನ್ನು ಕಳೆದರೂ ಬೇಸರ ಎನಿಸುವುದೇ ಇಲ್ಲ' ಎಂಬುದು ವಿನ್ಸೆಂಟ್ ಅಭಿಮಾನದ ನುಡಿಗಳು.

ಹಬ್ಬಗಳಲ್ಲೂ ವೈವಿಧ್ಯತೆ ಇದ್ದರೂ ಇವುಗಳ ಆಚರಣೆ ಬಗ್ಗೆ ವಿನ್ಸೆಂಟ್‌ಗೆ ಹೆಚ್ಚಿನ ಆಸಕ್ತಿ ಇಲ್ಲವಂತೆ. ಚರ್ಚ್‌ಗೆ ಹೋಗಿ ಪ್ರಾರ್ಥನೆ ಸಲ್ಲಿಸುವ ಅಭ್ಯಾಸವೂ ಇವರಿಗಿಲ್ಲವಂತೆ. ದೇವರು–ದಿಂಡಿರ ಬಗ್ಗೆಯೂ ಇವರಿಗೆ ನಂಬಿಕೆ ಇಲ್ಲವಂತೆ. ಉಳಿದಂತೆ ಇಲ್ಲಿನ ಭಾಷೆ, ವಾತಾವರಣ, ಸಂಸ್ಕೃತಿ, ಹೊಂದಿಕೊಳ್ಳುವ ಮನೋಭಾವ, ಸ್ನೇಹಪರತೆ, ಸಾಹಸ ಗುಣಗಳು ಎಲ್ಲವನ್ನೂ ಇವರು ಇಷ್ಟಪಡುತ್ತಾರಂತೆ.

★ ಅವನೀಶ್